ನಿಮ್ಮೊಡನೆ

# ಪರೀಕ್ಷೆ ನಕಲು, ಫಲಿತಾಂಶ ಅಸಲು!

ವಿಜಾಪುರ ಜಿಲ್ಲೆಯ ಕೆಲವೆಡೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜಾರೋಷವಾಗಿ ಕಾಪಿ ನಡೆದಿದೆ. ಕಿಟಕಿಯ ಬಳಿ ವಿದ್ಯಾರ್ಥಿಗಳ ಪೋಷಕರೇ ನಿಂತು ಉತ್ತರಗಳನ್ನು ಪೂರೈಸುತ್ತಿರುವ ದೃಶ್ಯ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಆಲಮಟ್ಟಿಯಲ್ಲಿ ಶಾಲಾ ಕೊಠಡಿಯ ಕಿಟಕಿಯ ಬಳಿ ನಿಂತು ಮೊಬೈಲ್ ಸಂಭಾಷಣೆ ನಡೆಸಿ ಉತ್ತರಗಳನ್ನು ಹೇಳಿಕೊಟ್ಟಿದ್ದಾರೆ. ಬಸವನ ಬಾಗೇವಾಡಿ ತಾಲ್ಲೂಕು ಕೊಲ್ಹಾರ, ವಡವಡಗಿ, ಯಾಳವಾರ, ಇಂಗಳೇಶ್ವರ, ಜಯವಾಡಗಿ ಪರೀಕ್ಷಾ ಕೇಂದ್ರಗಳ ಸುತ್ತ ನಿಂತಿರುವ ಪೋಷಕರನ್ನು ನಿಯಂತ್ರಿಸಲು ಸಾಧ್ಯವಾಗಿಲ್ಲ. ಇದ್ದ ಒಬ್ಬರೇ ಒಬ್ಬ ಪೊಲೀಸ್ ಪೇದೆಯ ಹಿಡಿತಕ್ಕೆ ಸಿಕ್ಕಿಲ್ಲ. ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ತೊಂದರೆಯಾಗುತ್ತಿದೆ, ದೂರ ಹೋಗಿ ಎಂದು ಸ್ವತಃ ಕ್ಷೇತ್ರ ಶಿಕ್ಷಣಾಧಿಕಾರಿ ಹಲವು ಬಾರಿ ಮನವಿ ಮಾಡಿದರೂ, ಪೋಷಕರು ಅಲ್ಲಿಂದ ಕದಲಲಿಲ್ಲವಂತೆ. ಪೋಷಕರು ಸಹಕರಿಸದಿದ್ದರೆ ಪರೀಕ್ಷಾ ಕೇಂದ್ರ ರದ್ದು ಮಾಡಲು ಶಿಫಾರಸು ಮಾಡಲಾಗುವುದು ಎಂದು ಹೇಳುವಷ್ಟರಮಟ್ಟಿಗೆ ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ.

ಇಂಡಿಯಲ್ಲಿ ಶಿಕ್ಷಕರೇ ಉತ್ತರ ಹೇಳಿಕೊಟ್ಟಿದ್ದಾರೆ! ಆಯಾ ವಿಷಯಗಳ ಶಿಕ್ಷಕರಿಂದ ಉತ್ತರಗಳ ನಕಲು ಸಿದ್ಧಗೊಳಿಸಿ ಪೂರೈಸಿದ್ದೂ ಆಗಿದೆ. ಮುದ್ದೇಬಿಹಾಳ ತಾಲ್ಲೂಕು ಬಳಬಟ್ಟಿಯಲ್ಲಿ ಪರೀಕ್ಷಾರ್ಥಿಗಳಿಗೆ ಅಗತ್ಯವಿದ್ದಷ್ಟು ಕೊಠಡಿಗಳೇ ಇಲ್ಲ. ಇದು ಈ ಶಾಲೆಯೊಂದರ ಸಮಸ್ಯೆಯಲ್ಲ. ಈ ಭಾಗದ ಇನ್ನೂ ಹಲವು ಶಾಲೆಗಳಲ್ಲಿ ಇದೇ ಪರಿಸ್ಥಿತಿ ಇದೆ. 70 ವಿದ್ಯಾರ್ಥಿಗಳನ್ನು ಹೊರಗೆ ಕುಳ್ಳಿರಿಸಿ ಪರೀಕ್ಷೆ ನಡೆಸಲಾಗಿದೆ. ಶಾಲೆಗೆ ಆವರಣ ಗೋಡೆ ಇಲ್ಲ. ಇಲ್ಲಿಯೂ ಸಾರ್ವಜನಿಕರು ಪರೀಕ್ಷಾ ಕೇಂದ್ರಕ್ಕೆ ನುಗ್ಗಿ ನಕಲು ಚೀಟಿ ಪೂರೈಸಿದ್ದಾರೆ. ಇಲ್ಲಿ ಇದ್ದದ್ದೂ ಒಬ್ಬರೇ ಪೇದೆ.

ವಿಜಾಪುರ, ಬಾಗಲಕೋಟೆ, ಗುಲ್ಬರ್ಗ, ರಾಯಚೂರು ಮುಂತಾದ ರಾಜ್ಯದ ಅತ್ಯಂತ ಹಿಂದುಳಿದ ಪ್ರದೇಶಗಳಲ್ಲಿ ಸಾಮೂಹಿಕ ಕಾಪಿ ನಡೆದ ಪ್ರಕರಣಗಳು ಆಗಾಗ ವರದಿಯಾಗುತ್ತಲೇ ಇವೆ. ಚಿತ್ರಸಮೇತ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಲೂ ಇವೆ. ಕಾಪಿ ಹೊಡೆದ ಮಾತ್ರಕ್ಕೆ ಫಲಿತಾಂಶ ಉತ್ತಮವಾಗಿ ಬರುವುದಾಗಿದ್ದರೆ, ಸರಾಸರಿಯಲ್ಲಿ ಈ ಜಿಲ್ಲೆಗಳು ಪ್ರಥಮ ಸ್ಥಾನದಲ್ಲಿರಬೇಕಾಗಿತ್ತು. ಆದರೆ ಹಾಗಾಗಿಲ್ಲ. ಆಕಸ್ಮಿಕ ಎನ್ನುವಂತೆ ಕೆಲವೊಮ್ಮೆ ಬಿಟ್ಟರೆ ಉಳಿದಂತೆ ಫಲಿತಾಂಶದಲ್ಲೂ ಹಿಂದುಳಿದಿವೆ. ಅಂದರೆ ಈ ಭಾಗದ ವಿದ್ಯಾರ್ಥಿಗಳು ಶತದಡ್ಡರೆ? ಹಾಗೆ ನಿರ್ದಿಷ್ಟ ಪ್ರದೇಶದ ವಿದ್ಯಾರ್ಥಿಗಳು ಜಾಣರು ಅಥವಾ ದಡ್ಡರಿರುತ್ತಾರೆ ಎಂಬುದೇ ಅವೈಜ್ಞಾನಿಕ. ಎಲ್ಲ ಪ್ರದೇಶಗಳಲ್ಲಿ ಜಾಣರಿರುತ್ತಾರೆ, ಅಂತೆಯೇ ದಡ್ಡರಿರುತ್ತಾರೆ. ಬೇಕಿರುವುದು ಮೂಲಸೌಕರ್ಯ ಹಾಗೂ ಅವಕಾಶಗಳು. ಹಿಂದುಳಿದ ಪ್ರದೇಶಗಳು ಅಂತಹ ಮೂಲಸೌಕರ್ಯಗಳಿಂದ ವಂಚಿತವಾಗಿವೆ. ಹಾಗೆಯೇ ಅಜ್ಞಾನ, ಒರಟುತನ ಮಡುಗಟ್ಟಿದೆ.

ಕಂಠಪಾಠ ಮಾಡಿ ಪರೀಕ್ಷೆಯಲ್ಲಿ ಪ್ರಬಂಧ ಮಾದರಿಯಲ್ಲಿ ಉತ್ತರ ಬರೆಯುವ ಪದ್ಧತಿ ಕ್ರಮೇಣ ಕಡಿಮೆಯಾಗುತ್ತಿದೆ. ಶಿಕ್ಷಣದಲ್ಲಿ ಹೊಸ ಅವಿಷ್ಕಾರಗಳು ನಡೆದಿವೆ. ಈಗೇನಿದ್ದರೂ ಚುಟುಕು ಉತ್ತರಗಳು. ಅದಕ್ಕೆ ಹೀಗೆ ಕಿಟಕಿಯಲ್ಲಿ ಬಂದು ಉತ್ತರಗಳನ್ನು ಪೂರೈಸುವ ಅಗತ್ಯವೇ ಇಲ್ಲ. ಶಿಕ್ಷಕರೇ ಸಲೀಸಾಗಿ ಉತ್ತರ ಹೇಳಿಕೊಡಬಹುದು. ಬೆಂಗಳೂರಿನಿಂದ ಬೀದರದವರೆಗೆ ಹಲವು ಶಾಲೆಗಳಲ್ಲಿ ಶಿಕ್ಷಕರೇ ಉತ್ತರ ಹೇಳಿಕೊಡುವುದು ಗುಟ್ಟಾಗಿ ನಡೆದೂ ಇದೆ. ಗುಣಾತ್ಮಕ ಶಿಕ್ಷಣಕ್ಕಿಂತ ಫಲಿತಾಂಶವೇ ಮುಖ್ಯ ಎಂಬ ಶಿಕ್ಷಣ ನೀತಿಯೇ ಇದಕ್ಕೆ ಕಾರಣ. ಶಿಕ್ಷಣ ವಾಣಿಜ್ಯೀಕರಣಗೊಂಡ ನಂತರ ಫಲಿತಾಂಶ 'ಫಿಕ್ಸಿಂಗ್'ನ ಜೂಜಾಟಗಳು ಕೆಲವು ಶ್ರೀಮಂತ ಶಾಲೆಗಳಲ್ಲಿ ಎಗ್ಗಿಲ್ಲದೆ ನಡೆಯುತ್ತಲೂ ಇವೆ.

2013ರಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ತೀರಾ ಕಡಿಮೆ ಫಲಿತಾಂಶ ಪಡೆದ ಉಡುಪಿ ಜಿಲ್ಲೆ ಪಿಯುಸಿಯಲ್ಲಿ 2ನೇ ಸ್ಥಾನಕ್ಕೆ ಮೇಲೇರಲು ಹೇಗೆ ಸಾಧ್ಯವಾಯಿತು? ಎಸ್‌ಎಸ್‌ಎಲ್‌ಸಿಯಲ್ಲಿ 2ನೇ ಸ್ಥಾನದಲ್ಲಿದ್ದ ಮಂಡ್ಯ ಪಿಯುಸಿಯಲ್ಲಿ 23ನೇ ಸ್ಥಾನಕ್ಕೆ ಇಳಿಯಲು ಹೇಗೆ ಸಾಧ್ಯವಾಯಿತು? ಉತ್ತಮ ಫಲಿತಾಂಶಕ್ಕೆ ಅನುಸರಿಸಿದ ಕ್ರಮ, ತಂತ್ರ, ವಿಧಾನಗಳ ಮಾಹಿತಿಯನ್ನು ದಾಖಲೆ ಸಮೇತ ನೀಡುವಂತೆ ಪರೀಕ್ಷಾ ಮಂಡಳಿ ನಿರ್ದೇಶಕರು ಕಳೆದ ವರ್ಷ ಆಯಾ ಜಿಲ್ಲೆಯ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಆದೇಶ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಅಷ್ಟಕ್ಕೂ ಸರ್ಕಾರಿ ಶಾಲೆಗಳ ಸಾಮೂಹಿಕ ಕಾಪಿ ಮಾತ್ರ ಏಕೆ ದೊಡ್ಡದಾಗಿ ಬಿಂಬಿತವಾಗುತ್ತಿದೆ?

ತಮ್ಮ ಮಕ್ಕಳನ್ನು ಪರೀಕ್ಷೆಯಲ್ಲಿ ಕಾಪಿ ಹೊಡೆಸಿ ಪಾಸು ಮಾಡಿಸುವುದು ತಮ್ಮ ಆದ್ಯ ಕರ್ತವ್ಯವೆಂದೇ ಈ ಭಾಗದ ಕೆಲವು ಅಮಾಯಕರು ಭಾವಿಸಿದಂತಿದೆ. ಪರೀಕ್ಷೆಗೆ ಹೋಗುವುದೆಂದರೆ ತಮ್ಮ ಮಕ್ಕಳು ಯುದ್ಧಕ್ಕೆ ಹೊರಟವರಂತೆ ಊರಲ್ಲೆಲ್ಲ ಡಂಗುರ ಸಾರಿ ಪರೀಕ್ಷಾ ಕೇಂದ್ರಕ್ಕೆ ದೌಡಾಯಿಸುವುದು– ನಾವು ಇನ್ನೂ ಯಾವ ಯುಗದಲ್ಲಿದ್ದೇವೆ ಎಂಬುದಕ್ಕೆ ಹಿಡಿದ ಕನ್ನಡಿಯಾಗಿದೆ. ಕಾಪಿ ಹೊಡೆಸಿ ಹೆಚ್ಚು ಅಂಕ ದಕ್ಕಿಸಿಕೊಳ್ಳುವುದು ನಯವಾಗಿ ನಡೆಯುವ ನಾಜೂಕಿನ ಕ್ರಿಯೆ! ಹೆಚ್ಚಿನ ಡೊನೇಷನ್ ತೆತ್ತ ಕೆಲವು ಶಾಲೆಗಳಲ್ಲಿ ಆಡಳಿತ ವರ್ಗದವರೇ ಅದನ್ನು ಮಾಡುವರಂತೆ. ಹಾಗೆ ಸಾಧ್ಯವಾಗದವರು ಇಂತಹ ಒರಟುತನಕ್ಕೆ ಇಳಿಯುತ್ತಾರೆ ಎನ್ನೋಣವೆ? ಹಿಂದುಳಿದ ಪ್ರದೇಶಗಳ ದುರಂತ ಎಂದರೆ ಇದೇ ಅಲ್ಲವೆ?

■ **ಗುಡಿಹಳ್ಳಿ ನಾಗರಾಜ**

ನಿರ್ದಿಷ್ಟ ಪ್ರದೇಶದ ವಿದ್ಯಾರ್ಥಿಗಳು ಜಾಣರು ಅಥವಾ ದಡ್ಡರಿರುತ್ತಾರೆ ಎಂಬುದೇ ಅವೈಜ್ಞಾನಿಕ. ಎಲ್ಲ ಪ್ರದೇಶಗಳಲ್ಲಿ ಜಾಣರಿರುತ್ತಾರೆ, ಅಂತೆಯೇ ದಡ್ಡರಿರುತ್ತಾರೆ. ಬೇಕಿರುವುದು ಮೂಲಸೌಕರ್ಯ ಹಾಗೂ ಅವಕಾಶಗಳು. ಹಿಂದುಳಿದ ಪ್ರದೇಶಗಳು ಅಂತಹ ಮೂಲಸೌಕರ್ಯಗಳಿಂದ ವಂಚಿತವಾಗಿವೆ.

